कर्नाटक महिला हिन्दी सेवा समिति, बेंगलोर-18

ಕರ್ನಾಟಕ ಮಹಿಳಾ ಹಿಂದೀ ಸೇವಾ ಸಮಿತಿ, ಬೆಂಗಳೂರು – 18

ಕನ್ನಡ ಮತ್ತು ಹಿಂದೀ ಸಾಹಿತ್ಯದ ವರಿಷ್ಠ ವಿದ್ವಾಂಸರಾದ

ಸನ್ಮಾನ್ಯ ಡಾ|| ಸಿದ್ಧಯ್ಯ ಪುರಾಣಿಕ ಐ.ಎ.ಎಸ್.

ಅವರ

# ದೀಕ್ಷಾಂತ ಭಾಷಣ



20ನೆಯ ಪದವೀದಾನ ಸಮಾರಂಭ

ತಾ. 29–1–1994 ಶನಿವಾರ

ಜಯ ಭಾರತ ಜಯ ಕರ್ನಾಟಕ

## ಕರ್ನಾಟಕ ಮಹಿಳಾ ಹಿಂದೀ ಸೇವಾ ಸಮಿತಿ

ಚಾಮರಾಜಪೇಟೆ, ಬೆಂಗಳೂರು-18.

## 20ನೆಯ ಪದವೀದಾನ ಸಮಾರಂಭದಲ್ಲಿ

## ಡಾ॥ ಸಿದ್ಧಯ್ಯ ಪುರಾಣಿಕರು ಮಾಡಿದ

# ದೀಕ್ಷಾಂತ ಭಾಷಣ

## ತಾ. 29-1-1994 ಶನಿವಾರ

ಸಮಿತಿಯ ಸನ್ಮಾನ್ಯ ಅಧ್ಯಕ್ಷೆ ಮಾತೃಶ್ರೀ ಆರ್. ಮುತ್ತೂಬಾಯಿ ಮಾನೆ ಅವರೆ, ಆದರಣೀಯ ಉಪಾಧ್ಯಕ್ಷೆ ಶ್ರೀಮತಿ ಕೆ. ಎಸ್. ಇಂದಿರಾದೇವಿ ಅವರೆ, ಗೌರವಾನ್ವಿತ ಕೋಶಾಧ್ಯಕ್ಷೆ ಶ್ರೀಮತಿ ಮಹಾಲಕ್ಷ್ಮಮ್ಮನವರೆ, ಪ್ರಭಾವಶಾಲಿ ಪ್ರಧಾನ ಸಚಿವೆ ಶ್ರೀಮತಿ ಬಿ. ಎಸ್. ಶಾಂತಾಬಾಯಿ ಅವರೆ, ಸಂಸ್ಥಾಪಕ-ಸಲಹೆಗಾರ ಮಾನ್ಯವರ ಡಾ॥ ಪಿ. ಆರ್. ಶ್ರೀನಿವಾಸ ಶಾಸ್ತ್ರಿಗಳೆ, ಸಮಿತಿಯ ಕಾರ್ಯಕಾರಿಣಿ ಸಮಿತಿಯ ಹಾಗೂ ಪರೀಕ್ಷಾ ಮಂಡಳಿಯ ಗಣ್ಯ ಸದಸ್ಯರೆ, ಇಂದು ಸನ್ಮಾನಿತರಾಗುತ್ತಿರುವ ರಸಋಷಿ ಪದ್ಮಶ್ರೀ ಪು. ತಿ. ನ. ಮತ್ತು ವಿದುಷೀಮಣಿ

ಡಾ॥ ಶ್ರೀಮತಿ ರಾಧಾಕೃಷ್ಣಮೂರ್ತಿ ಅವರೆ, ಪ್ರೊಫೆಸರ್ ಎಸ್. ಶ್ರೀಕಂಠಮೂರ್ತಿ ಅವರೆ, ಸ್ನಾತಕ ಸ್ನಾತಕಿ ಬಾಂಧವರೆ, ಸಮೂಹ ಮಾಧ್ಯಮಗಳ ಸೋದರ ಸೋದರಿಯರೆ, ಪ್ರತಿಷ್ಠಿತ ಆಹ್ವಾನಿತರೆ,

'ಕರ್ನಾಟಕ ಮಹಿಳಾ ಹಿಂದೀ ಸೇವಾ ಸಮಿತಿಯ' 20ನೆಯ ಪದವೀದಾನ ಸಮಾರಂಭದಲ್ಲಿ ದೀಕ್ಷಾಂತ ಭಾಷಣ ಮಾಡುವ ಭಾಗ್ಯ ನನಗೆ ದೊರೆತಿರುವುದು ಸಮಿತಿಯ ಸೂತ್ರಧಾರರ ಔದಾರ್ಯದಿಂದ. ಆಹ್ವಾನಿಸಿದ ಅವರೇ ನನ್ನಲ್ಲಿ ಈ ಗುರುತರ ಕಾರ್ಯಕ್ಕೆ ತಕ್ಕ ಅರ್ಹತೆಯನ್ನು ಆವಾಹಿಸಿ ನನ್ನಿಂದ ಈ ಕಿಂಚಿತ್ಸೇವೆಯನ್ನು ಕೈಕೊಳ್ಳಬೇಕೆಂದು ಕೋರುತ್ತೇನೆ. ನನಗೆ ನೀಡಿದ ಗೌರವಕ್ಕಾಗಿ ನನ್ನ ವಿನಮ್ರ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಕನ್ನಡ ನಾಡಿನ ಹಿರಿಮೆ ಗರಿಮೆಗಳಿಗೆ ಕನ್ನಡ ಮಹಿಳೆಯರ ಕೊಡುಗೆ ಅಗಾಧವಾದುದು, ಅದ್ವಿತೀಯವಾದುದು. ಅತ್ತಿಮಬ್ಬೆ, ಮುಕ್ತಾಯಕ್ಕ, ಅಕ್ಕಮಹಾದೇವಿ, ಅಕ್ಕಾದೇವಿ, ವಿಜಯಾಂಕಾ, ಗಂಗಾದೇವಿ, ಶಾಂತಲೆ, ಕೆಳದಿಯ ಚೆನ್ನಮ್ಮ, ಕಿತ್ತೂರ ಚೆನ್ನಮ್ಮ, ಬೆಳವಡಿಯ ಮಲ್ಲಮ್ಮ, ಸಂಚಿಯ ಹೊನ್ನಮ್ಮ, ಒನಕೆಯ ಓಬವ್ವ, ಹೆಳವನಕಟ್ಟೆ ಗಿರಿಯಮ್ಮ–ಯಾರನ್ನು ಹೆಸರಿಸುವುದು, ಯಾರನ್ನು ಬಿಡುವುದು? ಕನ್ನಡ ನಾಡಿನ ಗಗನದಲ್ಲಿ ಚೆನ್ನಮ್ಮನ ದಂಡೆಯಾಗಿ ಹೊಳೆಯುತ್ತಿದ್ದಾರೆ, ಕ್ಷೀರಪಥವಾಗಿ ಪ್ರಕಾಶಿಸುತ್ತಿದ್ದಾರೆ ಈ ನಾಡಿನ ಅಗಣಿತ ಮಹಾಮಹಿಳೆಯರು.

ನಮ್ಮ ಹೆಮ್ಮೆಯ ಈ ನಾರೀಪರಂಪರೆಯನ್ನು ಮುಂದುವರೆಸಲೋ ಎಂಬಂತೆ ಜನ್ಮತಾಳಿದೆ 'ಕರ್ನಾಟಕ ಮಹಿಳಾ ಹಿಂದೀ ಸೇವಾ ಸಮಿತಿ'. ಕಳೆದ ನಾಲ್ಕು ದಶಕಗಳಲ್ಲಿ ನಮ್ಮ ಸೋದರಿಯರಿದನ್ನು ಭರತಖಂಡದಲ್ಲಿಯೇ ಬಹುದೊಡ್ಡ ಮಹಿಳಾ ಸಂಘಟಿತ ಸಂಚಾಲಿತ ಹಿಂದೀ ಸೇವಾ ಸಂಸ್ಥೆಯನ್ನಾಗಿ ಬೆಳೆಸಿರುವುದನ್ನು ಎಷ್ಟು ಶ್ಲಾಘಿಸಿದರೂ ಸಾಲದು. ಈ ಚರಿತ್ರಾರ್ಹವಾದ ಭಾಷಾ ಭಾರತಿಯ ನಿರ್ಮಾಣ ಕಾರ್ಯದಲ್ಲಿ ತ್ರಿಕರಣ ಶುದ್ಧಿಯಿಂದ, ನಿರಪೇಕ್ಷ ಬುದ್ಧಿಯಿಂದ, ದಣಿವಿಲ್ಲದೆ ದುಡಿಯುತ್ತಲಿರುವ ಸೋದರಿಯರಿಗೆ, ಶ್ರದ್ಧೆ–ತ್ಯಾಗ–ಸೇವಾ ಮನೋಭಾವಗಳೊಡನೆ ಶ್ರಮಿಸುತ್ತಿರುವ ಹಿಂದೀ ಪ್ರಚಾರಕರಿಗೆ, ಶಿಕ್ಷಕರಿಗೆ, ನೆರವಾದ ದಾನಿಗಳಿಗೆ ನಮೋ, ನಮೋ !



ಸಮಿತಿಯ ಕಾರ್ಯ ಕ್ಷೇತ್ರದ ವಿಸ್ತಾರ ವಿಸ್ಮಯಕರ. ರಾಜ್ಯದ ಎಲ್ಲ ತಾಲ್ಲೂಕುಗಳಲ್ಲಿಯೂ ನಿಃಶುಲ್ಕ ಹಿಂದೀ ತರಗತಿಗಳು, ಪ್ರತಿ ಜಿಲ್ಲೆಯಲ್ಲಿ ಪ್ರಶಿಕ್ಷಣ ಮಹಾವಿದ್ಯಾಲಯಗಳು, ಪುಸ್ತಕ ಭಂಡಾರಗಳು, ವಾಚನಾಲಯಗಳು, ಪ್ರತಿವರ್ಷ 60 ಸಾವಿರಕ್ಕೂ ಮಿಕ್ಕಿ ವಿದ್ಯಾರ್ಥಿಗಳಿಗೆ ಹಿಂದೀ ಶಿಕ್ಷಣ, ಅಲ್ಪ ವೇತನದ ಮೇಲೆ ಅನಲ್ಪ ಸೇವೆ ಸಲ್ಲಿಸುತ್ತಿರುವ 2250 ಹಿಂದೀ ಪ್ರಚಾರಕರ ಸೇವಾಸೇನೆ, ವಿವಿಧ ಭಾಷೆಗಳಲ್ಲಿ ಮಹಿಳೆಯರಿಗೆ ಮುದ್ರಣ ಕಲೆ ಕಲಿಸುವ ಮಹಿಳಾ ಮುದ್ರಣ ಕಲಾ ಮಹಾವಿದ್ಯಾಲಯ, ಬೆರಳಚ್ಚು, ಶೀಘ್ರಲಿಪಿ ತರಬೇತಿ ಕೇಂದ್ರಗಳು, ನೂರಾರು ಉಪಯುಕ್ತ ಮೌಲಿಕ ಗ್ರಂಥಗಳನ್ನು ಪ್ರಕಟಿಸಿರುವ ಪ್ರಕಾಶನ ವಿಭಾಗ, ಪುಸ್ತಕ ವಿಕ್ರಯ ವಿಭಾಗ, 'ಹಿಂದಿ ಪ್ರಚಾರವಾಣಿ' ಎಂಬ ಶ್ರೇಷ್ಠಶ್ರೇಣಿಯ ಮಾಸ ಪತ್ರಿಕೆಯ ಪ್ರಕಟಣೆ, ಕಂಪ್ಯೂಟರ್ ವಿಭಾಗ, ಕನ್ನಡೇತರರಿಗೆ ಕನ್ನಡ ಕಲಿಸುವ ವಿಭಾಗ, ಪ್ರತಿವರ್ಷ ಪದವೀದಾನ ಸಮಾರಂಭದ ಶುಭ ಸಂದರ್ಭದಲ್ಲಿ ಗಣ್ಯ ವಿದ್ವಾಂಸರ, ಗಮನಾರ್ಹ ಹಿಂದೀ ಪ್ರಚಾರಕರ ಸನ್ಮಾನ, ಜಿಲ್ಲಾ ಮಟ್ಟದಲ್ಲಿ ಹಿಂದೀ ಪ್ರಚಾರಕರ ಸಮ್ಮೇಳನಗಳು, ವಿಭಾಗೀಯ ಸ್ತರದಲ್ಲಿ ವಿಚಾರಗೋಷ್ಠಿಗಳು, ಪಠ್ಯಪುಸ್ತಕ ರಚನಾಲಯಗಳು–ಎಷ್ಟೊಂದು ವಿಧಾಯಕ ಕಾರ್ಯಗಳು ಈ ಸಮಿತಿಯ ಸಿತಚ್ಛತ್ರದಡಿಯಲ್ಲಿ! ಸಮಿತಿಯ ಈ ಕಾರ್ಯಕ್ಷೇತ್ರ ಇನ್ನೂ ನೂರ್ಮಡಿ ವಿಸ್ತರಿಸಲೆಂದೂ, ನೂರ್ಕಾಲ ಅಲ್ಲ, ಅನಂತಕಾಲ ನಡೆಯಲೆಂದೂ ಹಾರೈಸುತ್ತೇನೆ.

ಈ ಸಮಿತಿಯನ್ನು ನಾನು ಮೆಚ್ಚಲು ಇನ್ನೊಂದು ಕಾರಣವಿದೆ. ನಮ್ಮ ಸಂವಿಧಾನದ 343 ನೆಯ ಅನುಚ್ಛೇದದ ಪ್ರಕಾರ ದೇವನಾಗರಿಲಿಪಿಬದ್ಧ ಹಿಂದೀ ಭಾಷೆಯು ನಮ್ಮ ಭಾರತದ ಒಕ್ಕೂಟದ ರಾಜಭಾಷೆಯೆಂದು ಅಂಗೀಕೃತವಾಗಿದೆ. ಕ್ರಮೇಣ ಇದನ್ನು ಒಕ್ಕೂಟದ ಅಧಿಕಾರವ್ಯಾಪ್ತಿಯಲ್ಲಿ ಬರುವ ಎಲ್ಲ ಕಾರ್ಯಾಲಯ–ಕಾರ್ಯಾಗಾರಗಳಲ್ಲಿಯೂ ಅನುಷ್ಠಾನಕ್ಕೆ ತರಬೇಕೆಂದು ಆದೇಶಿಸಲಾಗಿದೆ.

ಇದು ಎಷ್ಟು ಮುಖ್ಯವಾದುದೋ ಅಷ್ಟೇ ಮುಖ್ಯವಾದುದು ಹಿಂದೀ ಭಾಷೆಯನ್ನು ಹೇಗೆ ಬೆಳೆಸಬೇಕೆಂಬುದನ್ನು ಮನನೀಯವಾಗಿ ನಿರ್ದೇಶಿಸುವ ಅನುಚ್ಛೇದ 351. ಅದನ್ನಿಲ್ಲಿ ಇಡಿಯಾಗಿ ಉದ್ಧರಿಸಲೇ ಬೇಕು :—

ಅನುಚ್ಛೇದ 351 : "ಭಾರತದ ಸಂಮಿಶ್ರ ಸಂಸ್ಕೃತಿಯ ಎಲ್ಲ ಮೂಲತತ್ವಗಳ ಅಭಿವ್ಯಕ್ತಿ ಮಾಧ್ಯಮವಾಗುವಂತೆ ಹಿಂದೀ ಭಾಷೆಯನ್ನು ಅಭಿವೃದ್ಧಿಗೊಳಿಸುವುದು, ಮತ್ತು

ಅದರ ಜಾಯಮಾನಕ್ಕೆ ಚ್ಯುತಿಬಾರದಂತೆ ಹಿಂದೂಸ್ತಾನಿ ಭಾಷೆಯಲ್ಲಿ ಅಥವಾ ಎಂಟನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಭಾರತದ ಇತರ ಭಾಷೆಗಳಲ್ಲಿ ಬಳಕೆಯಲ್ಲಿರುವ ರೂಪಗಳು, ಶೈಲಿ ಮತ್ತು ಪದಾವಳಿಗಳನ್ನು ಏಕರೂಪಗೊಳಿಸುವುದರ ಮೂಲಕ, ಮತ್ತು ಅಗತ್ಯವಾದಾಗಲೆಲ್ಲ ಇಲ್ಲವೆ ಅಪೇಕ್ಷಿತವಾದೆಡೆಗಳಲ್ಲೆಲ್ಲ, ಅದರ ಶಬ್ದಭಂಡಾರಕ್ಕೆ ಮೊದಲನೆಯದಾಗಿ ಸಂಸ್ಕೃತದಿಂದಲೂ, ಎರಡನೆಯದಾಗಿ ಇತರ ಭಾಷೆಗಳಿಂದಲೂ ಶಬ್ದಗಳನ್ನು ಸ್ವೀಕರಿಸುವುದರ ಮೂಲಕ ಅದರ ಶ್ರೀಮಂತಿಕೆ ಸುನಿಶ್ಚಿತಗೊಳ್ಳುವಂತೆ ಹಿಂದೀ ಭಾಷೆಯ ಪ್ರಸಾರವನ್ನು ವೃದ್ಧಿಂಗತಗೊಳಿಸುವುದು ಒಕ್ಕೂಟದ ಕರ್ತವ್ಯವಾಗಿರತಕ್ಕದು."

ಇದರಲ್ಲಿ "ಭಾರತದ ಸಂಮಿಶ್ರ ಸಂಸ್ಕೃತಿಯ ಎಲ್ಲ ಮೂಲತತ್ವಗಳ ಅಭಿವ್ಯಕ್ತಿ ಮಾಧ್ಯಮವಾಗುವಂತೆ" ಎಂಬ ಆರಂಭದ ವಾಕ್ಯ ಅತ್ಯಂತ ಮಹತ್ವ ಪೂರ್ಣವಾದುದು. ಒಂದು ಭಾಷೆ ಕೇವಲ ವ್ಯವಹಾರ ಭಾಷೆಯಾದರೆ ಸಾಲದು, ವಿಚಾರ ವಿನಿಮಯದ ಭಾಷೆಯಾದರೂ ಸಾಲದು, ಶಿಕ್ಷಣ ಮಾಧ್ಯಮವಾದರೂ ಸಾಲದು, ಸಂಪರ್ಕಭಾಷೆ–ರಾಜಭಾಷೆಯಾದರೂ ಸಾಲದು. ಅದು ತನ್ನ ದೇಶದ ಸಂಸ್ಕೃತಿಯ ಎಲ್ಲಾ ಮೂಲ ತತ್ವಗಳ ಅಭಿವ್ಯಕ್ತಿ ಮಾಧ್ಯಮವಾಗಬೇಕು. ಹಾಗಾದಾಗ ಮಾತ್ರ ಅದು ದೇಶವಾಸಿಗಳ ಭಾವೈಕ್ಯ ಸಂವರ್ಧನೆಗೆ ಸಾಧನವಾಗುತ್ತದೆ. ಸಾಧನ ಮಾತ್ರ. ಅದೇ ಸಾಧ್ಯವಲ್ಲ. ಭಾರತೀಯ ಸಂಸ್ಕೃತಿಯೊಂದು ಸಂಮಿಶ್ರ ಸಂಸ್ಕೃತಿ. ಎಲ್ಲ ಭಾರತೀಯರಿಗೆ ಅನ್ವಯಿಸುವ ಇದರ ಮೂಲ ತತ್ವಗಳಿಗೆ ಸಾವಿರ ಸಾವಿರ ವರ್ಷಗಳ ಪ್ರತ್ಯೇಕ ಸಾಹಿತ್ಯ, ಕಲೆ, ಶಾಸ್ತ್ರ, ಇತಿಹಾಸ ಪರಂಪರೆಗಳನ್ನು ಪಡೆದಿರುವ ಪ್ರಾದೇಶಿಕ ಭಾಷೆಗಳು ಅಭಿವ್ಯಕ್ತಿಸಿರುವ ವಿಶೇಷಾಂಶಗಳೂ ಸೇರಿ, ಮಹಮ್ಮದೀಯರು, ಕ್ರೈಸ್ತರು, ಪಾರಸಿಗಳು, ಸಿಖ್ಖರು ಮೊದಲಾದವರು ಸೇರ್ಪಡಿಸಿರುವ ವಿನೂತನಾಂಶಗಳು ಸೇರಿ ಇದೊಂದು ಬಹುಧರ್ಮೀಯ, ಬಹು ಭಾಷೀಯ, ಬಹುಮುಖಿ ಸಮಷ್ಟಿ ಸಂಸ್ಕೃತಿಯಾಗಿ ಶೋಭಿಸುತ್ತಿದೆ. ಇದರ ಮೂಲ ತತ್ವಗಳ ಅಭಿವ್ಯಕ್ತಿ ಮಾಧ್ಯಮವಾಗುವಂತೆ ಹಿಂದೀ ಭಾಷೆಯನ್ನು ಬೆಳೆಸಬೇಕು.

ಇದು ಸಾಧ್ಯವಾಗಬೇಕಾದರೆ ಈ ಭಾಷೆಯ ಜಾಯಮಾನಕ್ಕೆ ಚ್ಯುತಿ ಬಾರದಂತೆ ಹಿಂದೂಸ್ತಾನಿ ಭಾಷೆಯಲ್ಲಿ ಮತ್ತು ಭಾರತದ ಬೇರೆ ಭಾಷೆಗಳಲ್ಲಿ ಪ್ರಚಲಿತವಿರುವ ರೂಪ, ಶೈಲಿ, ಪದಾವಳಿಗಳನ್ನು ಸಾಧ್ಯವಿರುವಷ್ಟು ಏಕರೂಪಗೊಳಿಸಬೇಕು. ಹಿಂದೀ ರಾಜ್ಯಗಳಲ್ಲಿ



ಹಿಂದಿಯೇ ಮಾತೃಭಾಷೆಯಾಗಿರುವವರು ಹಿಂದಿಯನ್ನು ತಮಗೆ ಬೇಕಾದಂತೆ ಬೆಳೆಸಲಿ. ಕಾದಂಬರಿಗೆ ಉಪನ್ಯಾಸವೆನ್ನಲಿ, ಟೀಕೆಗೆ ಆಲೋಚನೆಯೆನ್ನಲಿ, ಜಾತೀಯತೆಗೆ ಸಾಂಪ್ರದಾಯಿಕತೆಯೆನ್ನಲಿ, ಸುದ್ದಿಗಾರರಿಗೆ ಸಂವಾರ್ತದಾತಾ ಎನ್ನಲಿ-ಹಿಂದಿಯನ್ನು ಸಂಪರ್ಕ ಭಾಷೆಯನ್ನಾಗಿ ಬೆಳೆಸುವವರೂ ಬಳಸುವವರೂ ಇವುಗಳನ್ನೇ ಉಪಯೋಗಿಸಬೇಕೆಂದು ಹಠ ಹಿಡಿಯದಿರಲಿ. ಈ ಸಂಪರ್ಕ ಭಾಷೆಯ ಶಬ್ದ ಭಂಡಾರವನ್ನು ಮೊದಲನೆಯದಾಗಿ ಸಂಸ್ಕೃತ-ದಿಂದ, ಎರಡನೆಯದಾಗಿ ಭಾರತದ ಎಲ್ಲ ಭಾಷೆಗಳಿಂದ-ಉಪಭಾಷೆ, ಲಿಪಿ ರಹಿತ ಭಾಷೆ, ಬುಡ-ಕಟ್ಟುಗಳ ಭಾಷೆಗಳಿಂದ ಸಹ-ಶಬ್ದಗಳನ್ನು ಧಾರಾಳವಾಗಿ ಸ್ವೀಕರಿಸುವುದರ ಮೂಲಕ ಸಮೃದ್ಧಗೊಳಿಸಿಕೊಳ್ಳಲಿ. ಆಗ ಅದಕ್ಕೆ ಸಾಂಸ್ಕೃತಿಕ ಆಯಾಮವೂ ದೊರೆತು ಅದು ಸರ್ವ-ಭಾರತೀಯರ ಸಂತೋಷಪೂರ್ವಕ ಸ್ವೀಕೃತಿಗೆ ತಕ್ಕುದಾಗುತ್ತದೆ. ಶಾಸನದ, ಪ್ರಶಾಸನದ ಅನುಶಾಸನದ ಬಲದಿಂದ ಭಾಷೆಯನ್ನು ಒಲ್ಲದವರ ಗಂಟಲುಗಳಲ್ಲಿಳಿಸುವುದು ಸಾಧ್ಯವಿಲ್ಲ. ಅದು ಸಂಸ್ಕೃತಿಯ ಸಂವಹನ ಸಾಧನವಾಯಿತೋ, ಒಲ್ಲದವರ ಎದೆಯ ತಂತಿಗಳನ್ನೂ ಮಿಡಿಯ ತೊಡಗುತ್ತದೆ. ಭಾರತದ ಬಹುಭಾಗಗಳನ್ನು ಕಣ್ಣಾರೆ ಕಂಡ, ಹಲವು ಭಾಷೆಗಳ ಸಾಹಿತ್ಯದ ಸವಿಯನ್ನುಂಡ ಈ ಕವಿ ಉದ್ಗರಿಸಿದ್ದಾನೆ :

ಬೇಲೂರ ಬಾಲೆಯರು ವೇರೂಳ ಇಂದ್ರಸಭೆ
ಬಯಸಿ ಕಾಣುತಲಿಹರು ಕೈಲಾಸ ಸ್ವಪ್ನ !

ಗೋಲಗುಮ್ಮಟ ನಿತ್ಯ ತಾಜಮಹಲಿಗೆ ತನ್ನ
ಮೇಘ ಸಂದೇಶವನು ಕಳಿಸುತಿದೆ ನೂತ್ನ !

ಕುತುಬ ಮಿನಾರವಿದೊ ಕತ್ತೆತ್ತಿ ನೋಡುತಿದೆ
ದಕ್ಷಿಣದ ಎತ್ತರದ ಗೋಪುರಗಳನ್ನು ;

ಆ ಚಿದಂಬರ ಪುರುಷ ನಟರಾಜನನು ನೆನೆದು
ಕಟ್ಟುವರು ಉತ್ತರದಿ ನೂಪುರಗಳನ್ನು !

ಅಲ್ಲಿ ಕಾಂಚನಗಂಗೆ ಆಗುಂಬೆಗೌತಣದ
ಓಲೆಯನು ಬರೆಯುತಿದೆ ಬಂಗಾರದಲ್ಲಿ ;

ಆಸಾಮಿನೈಸಿರಿಯ ಐದೆಗಿದೊ ಕಳಿಸುತಿದೆ
ಕುಸುಮಗಳ ಶ್ರೀನಗರ ಶೃಂಗಾರವಲ್ಲಿ ;
ವರ್ಣಗಳ ಮೈಯಲ್ಲಿ ಮಿಂಚುಗಳ ಸೆರೆಹಿಡಿದ
ಆ ಅಜಂತೆಯು ಕಾರ್ಲೆ ಖಜುರಾಹೊಗಳಿಗೆ
ಸೌಂದರ್ಯ ಸಂದೇಶ ಕಳಿಸುತಿದೆ ಕಾಣದೆ ?

ಏನುಕ್ಕು ಬಂದಿತ್ತೊ ಭಾರತದ ಕಲೆಗೆ !
ಇನ್ನಾವ ದೇಶಕ್ಕೆ ಈ ಭಾಗ್ಯವಿಹುದಣ್ಣ,

ಇನ್ನೆಲ್ಲಿ ಈ ಸಿರಿಯ ಕಾಣಬಲ್ಲ ?
ಎಲ್ಲ ದೇಶವ ಸುತ್ತಿ ಇಲ್ಲಿಗೇ ಬರಬೇಕು ;

ಒಡೆದಿತ್ತು ಶಿವದ ಸೆಲೆ ಮೊದಲು ಇಲ್ಲೆ ;
ಭಾಗ್ಯಶಾಲಿಯು ನೀನು ಭಾರತದಿ ಬದುಕಿರುವೆ !

ಈ ಹಿಗ್ಗು ಸಾಹಸದ ಬುಗ್ಗೆಯಾಗಿ
ಮಾಡಿಸಲಿ ನಿನ್ನಿಂದ ನಿರ್ಮಾಣ ಕಾರ್ಯಗಳ
ಬೆಳಗಲೀ ಭಾರತವು ಸಗ್ಗವಾಗಿ !

ಈ ಸಮಿತಿ ಇವೇ ಧ್ಯೇಯೋದ್ದೇಶಾದರ್ಶಗಳೊಡನೆ ಇಷ್ಟು ವ್ಯಾಪಕವಾಗಿ ಇಲ್ಲಿ ಹಿಂದೀ ಪ್ರಸಾರ ಮಾಡುತ್ತಿರುವುದೇ ಇದರ ಬಗ್ಗೆ ನನ್ನ ಮೆಚ್ಚಿಗೆ ಹೆಚ್ಚಲು ಕಾರಣವಾಗಿದೆ. ತನ್ನ ಎಲ್ಲಾ ಹಿಂದೀ ಪರೀಕ್ಷೆಗಳಲ್ಲಿ ಒಂದು ಕನ್ನಡ ಪತ್ರಿಕೆಯನ್ನು ಕಡ್ಡಾಯಗೊಳಿಸುವುದರ ಮೂಲಕ, ಪ್ರತಿವರ್ಷ ಹತ್ತು ಸಾವಿರಕ್ಕೂ ಹೆಚ್ಚು ಕನ್ನಡೇತರರಿಗೆ ಕನ್ನಡ ಕಲಿಸುವುದರ ಮೂಲಕ, ತಾನು ಪ್ರಕಟಿಸುವ ಪುಸ್ತಕಗಳಲ್ಲಿ ಕರ್ನಾಟಕದ ಇತಿಹಾಸ, ಸಾಹಿತ್ಯ, ಕಲೆಗಳನ್ನು ಬಿತ್ತರಿಸುವುದರ ಮೂಲಕ, ಸಂವಿಧಾನದ 351ನೆಯ ಅನುಚ್ಛೇದದಲ್ಲಿ ನಿರ್ದೇಶಿತವಾಗಿರುವ ಸೂತ್ರಗಳಂತೆಯೇ ಹಿಂದೀ ಭಾಷೆಯನ್ನು ಹರಡಿಸುವುದರ ಮೂಲಕ ಅದು ಆದರ್ಶಪ್ರಾಯವಾದ ರೀತಿಯಲ್ಲಿ, ಕನ್ನಡಕ್ಕೆ ಧಕ್ಕೆ ಬಾರದೆ ಶಕ್ತಿ ಬರುವ ರೀತಿಯಲ್ಲಿ ತನ್ನ ಕಾರ್ಯ ನಿರ್ವಹಿಸುತ್ತಿದೆ. ಅದರ ಉದ್ದೇಶ ವಿವರಣೆಯಲ್ಲಿ ಬಂದಿರುವ ಈ ವಾಕ್ಯ ನನಗೆ ಮುಖ್ಯ :



"हिन्दी प्रचार के साथ भारत की एकता बनाये रखना समिति का प्रधान लक्ष्य है । प्रांतीय भाषा के सहयोग से हिन्दी का विकास करना उसका प्रमुख कार्यक्रम है ।"

ಈ ಸದುದ್ದೇಶದೊಡನೆ ಸಾಗಿರುವುದರಿಂದಲೇ ಈ ಸಮಿತಿಯ ಕಾರ್ಯ ಉತ್ತರೋತ್ತರ ಅಭಿವೃದ್ಧಿಯನ್ನು ಪಡೆಯುತ್ತ ಸಾಗಿದೆ ! ಪಡೆಯುತ್ತ ಹೋಗಲಿ ಎಂದು ಹಾರೈಸುತ್ತೇನೆ.

ಮುಗಿಸುವ ಮುನ್ನ ಇನ್ನೊಂದು ಮಾತು. ಸ್ವಾತಂತ್ರ್ಯ ಪೂರ್ವಕಾಲದಿಂದಲೂ ಗಾಂಧೀ ಪ್ರಾಂತವೆಂಬ ನೆಗಳ್ತೆಗೆ ಪಾತ್ರವಾಗಿರುವ ಕರ್ನಾಟಕವು ಯಾರ ವಿರೋಧವೂ ಇಲ್ಲದೆಯೆ ಹಿಂದೀ ಪ್ರಚಾರ ಕಾರ್ಯವನ್ನು ಬೃಹತ್ ಪ್ರಮಾಣದಲ್ಲಿ ಮಾಡುತ್ತ ಬಂದಿದೆ. ಈ ಸಮಿತಿಯಲ್ಲದೆ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಕರ್ನಾಟಕ ಶಾಖೆ, ಕರ್ನಾಟಕ ಪ್ರಾಂತೀಯ ಹಿಂದೀ ಪ್ರಚಾರ ಸಭೆ, ಕರ್ನಾಟಕ ಹಿಂದೀ ಪ್ರಚಾರ ಸಮಿತಿ, ಮೈಸೂರು ಹಿಂದೀ ಪ್ರಚಾರ ಪರಿಷತ್ತು ಮೊದಲಾದ ಸಂಸ್ಥೆಗಳು ಹಿಂದೀ ಪ್ರಚಾರದಲ್ಲಿ ತೊಡಗಿವೆ. ಕರ್ನಾಟಕದ ಶಿಕ್ಷಣ ಕ್ರಮದಲ್ಲಿ ತ್ರಿಭಾಷಾ ಸೂತ್ರವನ್ನು ಅಳವಡಿಸಿ ಹಿಂದಿಗೆ ಸ್ಥಾನ ಕಲ್ಪಿಸಲಾಗಿದೆ. ಇಲ್ಲಿಯ ವಿಶ್ವವಿದ್ಯಾಲಯಗಳಲ್ಲಿ ಹಿಂದೀ ವಿಭಾಗಗಳಿವೆ. ಪ್ರತಿವರ್ಷ ಲಕ್ಷಾವಧಿ ವಿದ್ಯಾರ್ಥಿಗಳು ಹಿಂದೀ ಭಾಷೆ ಕಲಿಯುತ್ತಲಿದ್ದಾರೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ, ಖಾದಿ-ಗ್ರಾಮೋದ್ಯೋಗ ರಂಗದಲ್ಲಿ, ಭೂದಾನ ಯಜ್ಞದಲ್ಲಿ, ಭಾವೈಕ್ಯ ಸಾಧನೆ ಸಂವರ್ಧನೆಗಳಲ್ಲಿ, ರಾಷ್ಟ್ರ ರಕ್ಷಣೆಯಲ್ಲಿ, ರಾಷ್ಟ್ರದ ಪ್ರತಿಯೊಂದು ಯೋಜನೆಯಲ್ಲಿ ಕರ್ನಾಟಕವು ಮಹತ್ವದ ಪಾತ್ರ ವಹಿಸುತ್ತಾ ಬಂದಿದೆ. ಇದಕ್ಕಾಗಿ ಕರ್ನಾಟಕಕ್ಕೆ ಭಾರತದ ಒಕ್ಕೂಟ ಸರಕಾರದಿಂದ ಸಿಕ್ಕ ಪ್ರತಿಫಲವೇನು ? ಭಾರತದ ಯಾವ ರಾಜ್ಯಕ್ಕೂ ಆಗದಿರುವಷ್ಟು ಅನ್ಯಾಯಗಳು ! ಹಿಂದೀ ವಿರೋಧಿ ರಾಜ್ಯಗಳಿಗೆ ಕೇಳಿದುದನ್ನೆಲ್ಲ ಕೊಡುವ, ಹಿಂದೀಪರ ರಾಜ್ಯಗಳಿಗೆ ನ್ಯಾಯವಾದುದನ್ನೂ ನೀಡದ ನೀತಿಯಿಂದಾಗಿಯೂ, ಹಿಂದೀ ರಾಜ್ಯಗಳಲ್ಲಿ ಹಿಂದಿಯೇತರ ಭಾಷೆಗಳಿಗೆ 'ನಾಮ ಕೆ ವಾಸ್ತೇ' ಆದರೂ ಅವಕಾಶಗಳು ಇದುವರೆವಿಗೂ ದೊರೆಯದಿದ್ದ ಕಾರಣದಿಂದಲೂ ಕರ್ನಾಟಕದಲ್ಲಿಯೂ ಹಿಂದಿಗೆ ವಿರೋಧ ಹುಟ್ಟತೊಡಗಿದೆ. ಕೇಂದ್ರ ಕಣ್ತೆರೆಯಬೇಕು. ಹಿಂದೀ ರಾಜ್ಯಗಳು ಕಣ್ತೆರೆಯಬೇಕು. ಹಿಂದಿಯ ಅಭಿವೃದ್ಧಿಗೆ ಕೊಡುತ್ತಿರುವ ಆದ್ಯತೆಯೊಡನೆ ಪ್ರಾದೇಶಿಕ ಭಾಷೆಗಳ ಬೆಳವಣಿಗೆಗೂ

ಮಹತ್ವ ನೀಡಬೇಕು. ನಾವು ಮೀರಾ, ಕಬೀರ, ತುಲಸಿ, ಸೂರದಾಸ, ಭಾರತೇಂದು,
ಜಯಂಶಕರಪ್ರಸಾದ, ಗುಪ್ತ, ದ್ವಿವೇದಿ, ಪಂತ, ನಿರಾಲಾ, ನವೀನ, ಅಜ್ಞೇಯ, ದಿನಕರ,
ಬಚ್ಚನ್, ಸುಮನ, ರಾಕೇಶ, ನಗೇಂದ್ರ ಮೊದಲಾದವರು ನಮ್ಮವರೆಂದು
ಅಭಿಮಾನದಿಂದ ಸ್ವೀಕರಿಸುವಂತೆ ಹಿಂದೀ ಭಾಷಾ ಭಾಷಿಕರೂ ನಮ್ಮ ಪಂಪ, ರನ್ನ, ಜನ್ನ
ರನ್ನೂ, ಬಸವೇಶ್ವರ, ಅಲ್ಲಮ, ಅಕ್ಕಮಹಾದೇವಿಯರನ್ನೂ, ಹರಿಹರ, ರಾಘವಾಂಕರನ್ನೂ,
ಪುರಂದರದಾಸ-ಕನಕದಾಸ-ಕುಮಾರವ್ಯಾಸರನ್ನೂ, ಸರ್ವಜ್ಞ, ಷರೀಫ್ ಸಾಹೇಬ,
ಬಿ.ಎಂ.ಶ್ರೀ., ಕುವೆಂಪು, ಬೇಂದ್ರೆ, ಕಾರಂತ, ಡಿ.ವಿ.ಜಿ., ಮಾಸ್ತಿ, ಗೋಕಾಕರನ್ನೂ
ತಮ್ಮವರೆಂದು ಅಭಿಮಾನದಿಂದ ಸ್ವೀಕರಿಸಬೇಕು. ಇದೇ ರೀತಿ ಇತರ ಭಾಷೆಗಳ ಉದ್ದಾಮ
ಕವಿ ವಿಭೂತಿಗಳನ್ನೂ ಸ್ವೀಕರಿಸಬೇಕು. ಆಗ ಹಿಂದೀ ಭಾಷೆಗೆ ಯಾರ ವಿರೋಧವೂ
ಇಲ್ಲದಂತಾಗಿ ಅದು ನಿಜವಾದ ಅರ್ಥದಲ್ಲಿ ಭಾರತದ ಸಂಮಿಶ್ರ ಸಂಸ್ಕೃತಿಯ ಎಲ್ಲ ಮೂಲ
ತತ್ವಗಳ ಅಭಿವಕ್ತಿ ಮಾಧ್ಯಮವಾಗಿ ರಾಷ್ಟ್ರದ ಏಕತೆ ಅಖಂಡತೆಗಳಿಗೆ, ಭಾರತೀಯರ
ಭಾವೈಕ್ಯಕ್ಕೆ ಬಲವಾದ ಸಾಧನವಾಗುವುದು. ಆ ದಿನ ಬೇಗ ಬರಲಿ. ಆ ದಾರಿಯಲ್ಲಿ
ಹೊರಟಿರುವ ಈ ಸಮಿತಿಗೆ ಎಲ್ಲ ಯಶಸ್ಸು ಸಿಗಲಿ. ಇಂದು ಇಲ್ಲಿ ಪದವೀಧರ
ರಾಗುತ್ತಿರುವ, ಈ ಹಿಂದೆ ಆಗಿರುವ, ಮುಂದೆ ಆಗಲಿರುವ ಎಲ್ಲಸ್ನಾತಕ ಸ್ನಾತಕಿಯರಿಗೆ.

ಭದ್ರಂ. ಶುಭಂ ಮಂಗಳಂ